ದ್ರಾಕ್ಷಿ ಬೆಳೆಗೆ ಮಳೆಯಿಂದ ಹಾನಿಯಾಗಿರುವುದು

೨೩೨೭. ಶ್ರೀ ಕೆ. ಪಿ. ಮೊಗೆಣ್ಣನವರು (ಸದಲಗ).—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರೈತರು ಲಕ್ಷಾಂತರ ರೂ.ಗಳ ಬಂಡವಾಳ ಹಾಕಿ ಬೆಳೆಸಿದ ದ್ರಾಕ್ಷಿ ಮಳೆಯಿಂದ ಹಾನಿಯಾಗುವ ಸಂಭವವಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಲಕ್ಷಾಂತರ ರೂ.ಗಳ ನಷ್ಟಕ್ಕೆ ಒಳಗಾಗುವ ರೈತರನ್ನು ಉಳಿಸಿ ಕೊಳ್ಳಲು ಸರ್ಕಾರದವರು ತೆಗೆದುಕೊಳ್ಳಲಿರುವ ಕ್ರಮಗಳೇನು ?

ಇ) ಮಹಾರಾಷ್ಟ್ರ ಸರ್ಕಾರದಲ್ಲಿ ಈ ವಿಷಯದಲ್ಲಿ ವಿಮೆ ಯೋಜನೆ ಮಾಡಿ ರೈತರನ್ನು ಸಂರಕ್ಷಿಸುವ ಯೋಜನೆಗಳಂತೆ ನಮ್ಮ ಸರ್ಕಾರದಲ್ಲಿಯೂ ಮಾಡಲು ಕ್ರಮ ಕೈಗೊಳ್ಳಲು ಆಗುವುದೇ ?

ಶ್ರೀ ವೈ.ಕೆ. ರಾಮಯ್ಯ (ವಿದ್ಯುತ್ ಮತ್ತು ತೋಟಗಾರಿಕೆ ರಾಜ್ಯ ಸಚಿವರು).—

ಅ) ಹೌದು. ಸಹಜವಾಗಿ ಮಳೆಗಾಲದಲ್ಲಿ ಬಿದ್ದ ಮಳೆಯಿಂದ ದ್ರಾಕ್ಷಿ ಬೆಳೆಗೆ ಹಾನಿಯಾಗುವುದಿಲ್ಲ. ಆದರೆ ಈ ಸಾಲಿನಲ್ಲಿ (೮೭-೮೮) ನವೆಂಬರ್ ಮತ್ತು ಡಿಸೆಂಬರ್ ತಿಂಗಳಲ್ಲಿ ಬಿದ್ದ ಅಕಾಲಿಕ ಮಳೆಯಿಂದ ಪರಾಗಸ್ಪರ್ಶ ಹಂತದಲ್ಲಿದ್ದ ದ್ರಾಕ್ಷಿ ತೋಟಗಳಿಗೆ ಸ್ವಲ್ಪ ಮಟ್ಟಿಗೆ ಹಾನಿಯಾಗಿರುತ್ತದೆ.

ಆ) ನೈಸರ್ಗಿಕ ವೈಪರೀತ್ಯದಿಂದ ದ್ರಾಕ್ಷಿ ಬೆಳೆಗೆ ಹಾನಿಯಾಗುವ ನಷ್ಟಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುವುದು ಕಷ್ಟಕರ.

ಇ) ಮಹಾರಾಷ್ಟ್ರ ಸರ್ಕಾರ ದ್ರಾಕ್ಷಿ ಬೆಳೆ ವಿಮಾ ಯೋಜನೆ ಜಾರಿಗೊಳಿಸಿರುವುದಿಲ್ಲ. ಆದರೆ ಮಹಾರಾಷ್ಟ್ರದಲ್ಲಿ ರಾಜ್ಯ ದ್ರಾಕ್ಷಿ ಬಾಗಾಯಿತ್‌ದಾರ್ ಸಂಘವು ದ್ರಾಕ್ಷಿ ಬೆಳೆಗೆ ವಿಮಾ ಯೋಜನೆಯನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಿರುವುದು ತಿಳಿದು ಬಂದಿದೆ. ಕರ್ನಾಟಕ ಸರ್ಕಾರ ವಿಮಾ ಯೋಜನೆಯನ್ನು ದ್ರಾಕ್ಷಿ ಬೆಳೆಗೆ ಜಾರಿಗೊಳಿಸಲು ಕೇಂದ್ರ ಸರ್ಕಾರದ ನೀತಿ ನಿಯಮಗಳ ಪ್ರಕಾರ ಮಾಡಲು ಸಾಧ್ಯವಿಲ್ಲ.

ಹಾನಗಲ್ ಶ್ರೀ ಕುಮಾರೇಶ್ವರ ಆರ್ಟ್ಸ್ ಕಾಲೇಜ್ ಪ್ರಾಧ್ಯಾಪಕರ ಬಗ್ಗೆ

೨೩೨೮. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಾನಗಲ್ ಶ್ರೀ ಕುಮಾರೇಶ್ವರ ಕಲಾ ಕಾಲೇಜಿನಲ್ಲಿರುವ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಸಂಖ್ಯೆ ಎಷ್ಟು ?

ಆ) ಕಾಲೇಜು ಪ್ರಾರಂಭವಾದಾಗಿನಿಂದಲೂ ಅವರಿಗೆ ಸರಿಯಾಗಿ ಸಂಬಳವನ್ನು ನೀಡಲಾಗುತ್ತಿದೆಯೇ ?

ಇ) ಕಾಲೇಜಿಗೆ ಸಹಾಯಧನ ನೀಡಲಾಗುತ್ತಿದೆಯೆ? ಹಾಗಿದ್ದಲ್ಲಿ ಎಂದಿನಿಂದ ?

ಈ) ೪ ತಿಂಗಳುಗಳಿಂದ ಜಿಲ್ಲಾಧಿಕಾರಿಯವರ ಕಛೇರಿ ಎದುರು ಕೆಲಸದಿಂದ ತೆಗೆದು ಹಾಕಲ್ಪಟ್ಟಿರುವ ವಿರುದ್ಧ ಸತ್ಯಾಗ್ರಹ ಹೂಡಿದವರನ್ನು ಪುನರ್ ನೇಮಕ ಮಾಡಿಕೊಳ್ಳಲಾಗಿದೆಯೆ?

ಉ) ಅವರ ನೇಮಕಾತಿ ಹಾಗೂ ಸೇವೆಗಳನ್ನು ಶಿಕ್ಷಣ ಇಲಾಖೆ ಮಾನ್ಯತೆ ಕೊಟ್ಟಿದೆಯೆ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಸಚಿವರು).—

ಅ) ಬೋಧಕ ಸಿಬ್ಬಂದಿ—೧೫
ಬೋಧಕೇತರ ಸಿಬ್ಬಂದಿ—೧೪
ಒಟ್ಟು—೨೯.